# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :1046 |
| 2 | ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | :17.03.2025 |
| 4. | ಉತ್ತರಿಸುವ ಸಚಿವರು | :ಆಹಾರ ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಇತ್ಯರ್ಥ ಆಯೋಗ ಹಾಗೂ ಜಿಲ್ಲಾ ಗ್ರಾಹಕ ನ್ಯಾಯಾಲಯಗಳಲ್ಲಿ ಕಕ್ಷಿದಾರರಿಗೆ ನ್ಯಾಯದಾನ ವಿಳಂಬವಾಗುತ್ತಿರುವುದು ನಿಜವೇ:</td><td>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ನಿಗದಿತ ಕಾಲಾವಧಿಯಲ್ಲಿ ಇತ್ಯರ್ಥಪಡಿಸುವ ಕುರಿತು ಕ್ರಮವಹಿಸಲಾಗುತ್ತಿದ್ದು, ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿರುವ ಕಾರಣ ಕೆಲವು ಪ್ರಕರಣಗಳು ನಿಗದಿತ ಅವಧಿಯನ್ನು ಮೀರಿ ಇತ್ಯರ್ಥಕ್ಕಾಗಿ ಬಾಕಿಯಿರುತ್ತದೆ.</td></tr>
<tr><td>ಆ)</td><td>ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ರಾಜ್ಯ ಆಯೋಗದಲ್ಲಿ ಹಾಗೂ ಜಿಲ್ಲಾ ವೇದಿಕೆಗಳಲ್ಲಿ ಗ್ರಾಹಕರಿಂದ ಎಷ್ಟು ದೂರಿನ ಅರ್ಜಿಗಳು ಬಂದಿದೆ; ಇದರಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ;</td><td>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಕಳೆದ 3 ವರ್ಷದಿಂದ ದಿನಾಂಕ: 28.02.2025 ರವರೆಗೆ ದಾಖಲಾಗಿರುವ ದೂರುಗಳು ಹಾಗೂ ಅದರಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th></th><th colspan="2">2022</th><th colspan="2">2023</th><th colspan="2">2024</th><th colspan="2">2025 (Jan and Feb.25)</th></tr>
<tr><th colspan="9">State Commission</th></tr>
<tr><th>Case type</th><th>Filed</th><th>Dispo sed</th><th>Filed</th><th>Dispo sed</th><th>Filed</th><th>Dispo sed</th><th>Filed</th><th>Dis po sed</th></tr>
<tr><td>Appeals</td><td>2549</td><td>1718</td><td>2500</td><td>939</td><td>3380</td><td>539</td><td>218</td><td>3</td></tr>
<tr><td>Compl-aints</td><td>238</td><td>118</td><td>117</td><td>36</td><td>96</td><td>7</td><td>5</td><td>0</td></tr>
<tr><th colspan="9">District Commission</th></tr>
<tr><td>Compl-aints</td><td>6170</td><td>5894</td><td>7231</td><td>6354</td><td>8232</td><td>3756</td><td>1225</td><td>26</td></tr>
</table></td></tr>
<tr><td>ಇ)</td><td>ರಾಜ್ಯದಲ್ಲಿ ರಾಜ್ಯ ಗ್ರಾಹಕ ಆಯೋಗ ಮತ್ತು ಜಿಲ್ಲಾ ವೇದಿಕೆಗಳಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಹುದ್ದೆಗಳು ಖಾಲಿ ಇದೆಯೇ; ಇದ್ದಲ್ಲಿ ಎಷ್ಟು ವರ್ಷಗಳಿಂದ ಖಾಲಿ ಉಳಿಸಿಕೊಳ್ಳಲಾಗಿದೆ; ಇದಕ್ಕೆ ಇರುವ ಕಾರಣವಾದರೂ ಏನು;</td><td>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಖಾಲಿಯಿರುವ ಅಧ್ಯಕ್ಷರ ಹಾಗೂ ಸದಸ್ಯರ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ ಸಂ</th><th>ಹುದ್ದೆಯ ವಿವರ</th><th>2022</th><th>2023</th><th>2024</th><th>2025</th><th>ಒಟ್ಟು</th></tr>
<tr><td>1</td><td>ಅಧ್ಯಕ್ಷರು-ರಾಜ್ಯ ಆಯೋಗ</td><td></td><td></td><td>1</td><td></td><td>1</td></tr>
</table></td></tr>
</table>

<table>
<tr>
<td></td>
<td></td>
<td>
<table>
<tr><td>2</td><td>ಸದಸ್ಯರು-ರಾಜ್ಯ ಆಯೋಗ</td><td>2</td><td></td><td>2</td><td>3</td><td>7</td></tr>
<tr><td>3</td><td>ಅಧ್ಯಕ್ಷರು-ಜಿಲ್ಲಾ ಆಯೋಗ</td><td>5</td><td>2</td><td>4</td><td>4</td><td>15</td></tr>
<tr><td>4</td><td>ಸದಸ್ಯರು-ಜಿಲ್ಲಾ ಆಯೋಗ</td><td>6</td><td>3</td><td>4</td><td>6</td><td>19</td></tr>
</table>
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಖಾಲಿಯಿರುವ ಮತ್ತು ಮುಂದಿನ 6 ತಿಂಗಳಲ್ಲಿ ಖಾಲಿಯಾಗುವ ಅಧ್ಯಕ್ಷರ ಹಾಗೂ ಸದ್ಯಸರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರದಲ್ಲಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಆನಾಸ 27 ಸಲಫ 2023 ದಿನಾಂಕ: 24.07.2024 ರಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದ್ದು, ಆಯ್ಕೆ ಸಮಿತಿಯ ತೀರ್ಮಾನದಂತೆ ಖಾಲಿಯಿರುವ ಮತ್ತು ಮುಂದಿನ 06 ತಿಂಗಳಿನಲ್ಲಿ ಖಾಲಿಯಾಗುವ ಅಧ್ಯಕ್ಷರ ಹಾಗೂ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
</td>
</tr>
<tr>
<td>ಈ)</td>
<td>ಖಾಲಿ ಇರುವ ಹುದ್ದೆಗಳನ್ನು ಸಕಾಲದಲ್ಲಿ ಭರ್ತಿ ಮಾಡದಿಲ್ಲದಿರುವುದರಿಂದ ಗ್ರಾಹಕರ ದೂರುಗಳನ್ನು ವಿಲೇವಾರಿ ಮಾಡಲು ವಿಳಂಬವಾಗುತ್ತಿದ್ದು ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?</td>
<td>ಖಾಲಿಯಿರುವ ಹುದ್ದೆಗಳಿಗೆ ಗ್ರಾಹಕರ ಸಂರಕ್ಷಣಾ ಕಾಯ್ದೆ-2019 ರ ಕಲಂ 70 (3) ಮತ್ತು ಗ್ರಾಹಕ ಸಂರಕ್ಷಣಾ (ರಾಜ್ಯ ಆಯೋಗಗಳ ಮತ್ತು ಜಿಲ್ಲಾ ಆಯೋಗಗಳ ಅಧ್ಯಕ್ಷರ ಹಾಗೂ ಸದಸ್ಯರ ವೇತನ-ಭತ್ಯೆ ಹಾಗೂ ಸೇವಾ ಷರತ್ತು) ಮಾದರಿ ನಿಯಮಗಳು, 2020 ರ ನಿಯಮ 6 ರಡಿಯಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗಿರುವುದರಿಂದ, ಗ್ರಾಹಕರ ದೂರುಗಳನ್ನು ವಿಲೇವಾರಿ ಮಾಡುವಲ್ಲಿ ವಿಳಂಬಕ್ಕೆ ಆಸ್ಪದ ವಿರುವುದಿಲ್ಲ.</td>
</tr>
</table>

ಸಂಖ್ಯೆ: ಇ-ಆನಾಸ 37 ಸಲಫ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ
ಕಾನೂನು ಮಾಪನಶಾಸ್ತ್ರ, ಸಚಿವರು.